# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : 348 (366) |
| ಮಾನ್ಯ ಸದಸ್ಯರ ಹೆಸರು | : ಶ್ರೀ ಹೆಚ್. ಎಂ. ರಮೇಶಗೌಡ |
| ವಿಷಯ | : ಕೋವಿಡ್-19 ನಿಂದ ರಾಜ್ಯದ ಪ್ರವಾಸೋದ್ಯಮ ಕ್ಷೀಣಿಸುತ್ತಿರುವ ಕುರಿತು. |
| ಉತ್ತರಿಸುವವರು | : ಮುಖ್ಯ ಮಂತ್ರಿ |
| ಉತ್ತರಿಸುವ ದಿನಾಂಕ | : 10-12-2020 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದೇಶದಲ್ಲಿ ಅತ್ಯುತ್ತಮವಾದ ಪ್ರವಾಸಿ ತಾಣಗಳನ್ನು ಹೊಂದಿರುವ ಕರ್ನಾಟಕ ರಾಜ್ಯ ಕೋವಿಡ್ ಸಂಕಷ್ಟಕ್ಕೆ ತುತ್ತಾಗಿ ಪ್ರವಾಸೋದ್ಯಮ ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ರಾಜ್ಯದ ಧಾರ್ಮಿಕ ಪ್ರವಾಸೋದ್ಯಮ ಚಾರಿತ್ರಿಕ ಮತ್ತು ಅರಣ್ಯ ಪ್ರವಾಸೋದ್ಯಮ ಕರಾವಳಿ ಪ್ರವಾಸಿ ತಾಣಗಳ ಪುನರ್ ಅಭಿವೃದ್ಧಿಗೆ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ; | ಕೋವಿಡ್-19ರ ನಂತರ, ಸುರಕ್ಷತೆ ಹಾಗೂ ನೈರ್ಮಲ್ಯೀಕರಣದ ಸಂಬಂಧ ಪ್ರವಾಸಿಗರು,ಆತಿಥ್ಯ ಸೇವೆಯ ಘಟಕಗಳು (ಹೋಟೆಲ್& ರೆಸಾರ್ಟ್ ಇತ್ಯಾದಿ), ಪ್ರವಾಸಿ ತಾಣಗಳು ಹಾಗೂ ಪ್ರವಾಸಿ ಸಾರಿಗೆ ಸೇವೆಗಳನ್ನು ಚಾಲನಗೊಳಿಸಲು ಅಗತ್ಯವಾಗಿರುವ ಕ್ರಮಗಳನ್ನು ಅನುಸರಿಸುವ ಬಗ್ಗೆ ಇಲಾಖೆಯಿಂದ ಪ್ರತ್ಯೇಕ ಮಾರ್ಗಸೂಚಿ (SOP) ಗಳನ್ನು ಹೊರಡಿಸಲಾಗಿದೆ.<br><br>ಪ್ರವಾಸೋದ್ಯಮ ಅಂಗ ಸಂಸ್ಥೆಗಳಾದ ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ (ಜೆ.ಎಲ್.ಆರ್.) ಹಾಗೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಡಿ.ಸಿ.) ಗಳು ಪ್ರವಾಸಿಗರಿಗೆ ಒದಗಿಸಬೇಕಾಗಿರುವ ಸುರಕ್ಷತೆಗಳೊಂದಿಗೆ ತೆರೆದು, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.<br><br>ಸರ್ಕಾರದ ಮಾರ್ಗಸೂಚಿಗಳನ್ವಯ ರಾಜ್ಯದ ಬಹುತೇಕ ಪ್ರಮುಖ ಪ್ರವಾಸಿ ತಾಣಗಳು ಪ್ರವಾಸಿಗರಿಗೆ ಮುಕ್ತವಾಗಿದ್ದು, ಇತ್ತೀಚಿನ ದಿನಗಳಲ್ಲಿ ಇಲ್ಲಿಗೆ ಭೇಟಿ ನೀಡುತ್ತಿರುವ ಪ್ರವಾಸಿಗರ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ.<br><br>ಪ್ರವಾಸೋದ್ಯಮ ಇಲಾಖೆಯಿಂದ ರಾಜ್ಯದ ವಿವಿಧ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಇಲಾಖೆಗೆ ಒದಗಿಸುವ ಅನುದಾನದನ್ವಯ ವಿವಿಧ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುತ್ತದೆ. ಈ ಪೈಕಿ ವಿವಿಧ ವರ್ಗಗಳ ಪ್ರವಾಸಿ ತಾಣಗಳ ಬಳಿ ಕೈಗೊಳ್ಳುತ್ತಿರುವ ಕಾಮಗಾರಿಗಳ ವಿವರ ಕೆಳಕಂಡಂತಿದೆ;<br><br>**1. ಧಾರ್ಮಿಕ ಪ್ರವಾಸೋದ್ಯಮ:**<br>ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ಹಾಗೂ ಇತರ ಧಾರ್ಮಿಕ ಪ್ರವಾಸಿ ತಾಣಗಳ ಬಳಿ ಪ್ರವಾಸಿ ಸೌಲಭ್ಯಗಳನ್ನು ಹಾಗೂ ಪುರಾತನ ದೇವಾಲಯಗಳ ಸಂರಕ್ಷಣೆ ಮತ್ತು ಪುನರುಜ್ಜೀವನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.<br><br>**2. ಕರಾವಳಿ ಪ್ರವಾಸೋದ್ಯಮ:**<br>ರಾಜ್ಯವು ಸುಮಾರು 320 ಕಿ.ಮೀ. ಕರಾವಳಿ ತೀರವನ್ನು ಹೊಂದಿದ್ದು, ಸದರಿ ಕರಾವಳಿ ಹೊಂದಿಕೊಂಡಂತೆ ಇರುವ ಬೀಚ್ಗಳ ಅಭಿವೃದ್ಧಿ ಕಾಮಗಾರಿಗಳನ್ನು ಅಗತ್ಯತೆ ಅನುಸಾರವಾಗಿ ಕೈಗೆತ್ತಿಕೊಳ್ಳಲಾಗುತ್ತಿದೆ.<br><br>ಉಡುಪಿ ಜಿಲ್ಲೆಯ, ಪಡುಬಿದ್ರೆ ಬೀಚ್‌ನ ಎಂಡ್ ಪಾಯಿಂಟ್‌ನ ವ್ಯಾಪ್ತಿಯಲ್ಲಿರುವ 5.88 ಎಕರೆ ಸರ್ಕಾರಿ ಜಾಗದಲ್ಲಿ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (MoEFCC) ಹಾಗೂ ಸಮಗ್ರ ಕರಾವಳಿ ನಿರ್ವಹಣ ಸಂಘ (SICOM) ರವರ ಸಹಯೋಗದೊಂದಿಗೆ ಪರಿಸರ ಮಂತ್ರಾಲಯರವರ ಬ್ಲ್ಯೂಫ್ಲ್ಯಾಗ್ ಸರ್ಟಿಫಿಕೇಶನ್ ಯೋಜನೆಯನ್ನು ರೂ.268.50 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಭಾರತದ ಒಟ್ಟಾರೆ ಕಡಲತೀರಗಳ ಪೈಕಿ ಭಾರತದ "ಬ್ಲೂ-ಫ್ಲ್ಯಾಗ್" ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ 08 ಕಡಲತೀರಗಳಲ್ಲಿ ರಾಜ್ಯದ ಉಡುಪಿ ಜಿಲ್ಲೆಯ ಪಡುಬಿದ್ರೆ ಹಾಗೂ ಉತ್ತರಕನ್ನಡಜಿಲ್ಲೆಯ ಕಾಸರಕೋಡ ಕಡಲತೀರಗಳು ಗುರುತಿಸಲ್ಪಟ್ಟಿರುತ್ತವೆ. |

..2/-

| | | |
|---|---|---|
| | | ಇದಲ್ಲದೇ, ಸಸಿಹಿತ್ಲು, ಸೆಂಟ್ ಮೇರಿಸ್ ಐಲ್ಯಾಂಡ್, ಡಾ: ರವೀಂದ್ರನಾಥ್ ಟ್ಯಾಗೂರ್ ಕಡಲತೀರ, ದೇವಬಾಗ್ ಇತ್ಯಾದಿ ಕಡಲತೀರಗಳಲ್ಲೂ ಸಹ ಅಗತ್ಯ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ಪ್ರವಾಸೋದ್ಯಮವನ್ನು ಅವಲಂಭಿಸಿರುವ ಸಾವಿರಾರು ಜನರು ಕೋವಿಡ್ ಸಂಕಷ್ಟದಿಂದ ನರಳುತ್ತಿದ್ದು, ಪ್ರವಾಸೋದ್ಯಮ ಇಲಾಖೆಯಿಂದ ಅವರನ್ನು ಉತ್ತೇಜಿಸುವ ನೂತನ ಕಾರ್ಯಕ್ರಮಗಳೇನಾದರೂ ಇವೆಯೇ; (ವಿವರ ನೀಡುವುದು) | ಪ್ರವಾಸೋದ್ಯಮ ಇಲಾಖೆಯಿಂದ ಜಾರಿಗೆ ತಂದಿರುವ ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರಲ್ಲಿ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ವಿವಿಧ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಮುಂದೆ ಬರುವ ಉದ್ದಿಮೆದಾರರನ್ನು ಉತ್ತೇಜಿಸಲು ಹೂಡಿಕೆ ಸಹಾಯಧನ ಹಾಗೂ ಹಲವು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಿ ಕೊಳ್ಳಲಾಗಿದೆ. |
| ಈ) | ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬೆಳಕಿಗೆ ಬಾರದ ಅದ್ಭುತ ಪ್ರವಾಸಿ ತಾಣಗಳಿದ್ದು ಇವುಗಳನ್ನು ಗುರುತಿಸಿ ಅಭಿವೃದ್ಧಿಪಡಿಸಲು ಸರ್ಕಾರ ಮುಂದೆ ಇರುವ ಪ್ರಸ್ತಾವನೆ ಯಾವುದು? | ಕರ್ನಾಟಕ ಪ್ರವಾಸೋದ್ಯಮನೀತಿ 2015-20ರಲ್ಲಿ ರಾಜ್ಯದ 319 ಪ್ರವಾಸಿ ತಾಣಗಳನ್ನು ಗುರುತಿಸಿ ಅವುಗಳ ಅಭಿವೃದ್ಧಿಗಾಗಿ ಹಲವು ಮೂಲ ಸೌಲಭ್ಯ ಹಾಗೂ ಇತರೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಆದರೆ, ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರಲ್ಲಿ ರಾಜ್ಯದಲ್ಲಿ ಈಗಾಗಲೇ ಈ ಹಿಂದಿನ ನೀತಿಯಲ್ಲಿಗುರುತಿಸಿರುವ 319 ಪ್ರವಾಸಿ ತಾಣಗಳೊಂದಿಗೆ, ಹೆಚ್ಚುವರಿಯಾಗಿ ಗುರುತಿಸಬಹುದಾದ ಪ್ರವಾಸಿ ತಾಣಗಳ ಪಟ್ಟಿಯನ್ನು ಎಲ್ಲಾ ಜಿಲ್ಲೆಗಳಿಂದ ಪಡೆದಿದ್ದು, ಇವುಗಳ ಪೈಕಿ ಆದ್ಯತೆಯ ಮೇರೆಗೆ ಹೆಚ್ಚುವರಿ ಪ್ರವಾಸಿ ತಾಣಗಳನ್ನು ಗುರುತಿಸಿ, ಆ ಪ್ರವಾಸಿ ತಾಣಗಳ ಅಗತ್ಯತೆಗೆ ಅನುಗುಣವಾಗಿ ಹಾಗೂಅನುದಾನದ ಲಭ್ಯತೆಗೆ ಅನುಗುಣವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಪರಿಶೀಲಿಸಲಾಗುವುದು. |

ಸಂಖ್ಯೆ: ಟಿಓಆರ್ 251 ಟಿಡಿವಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.